ಅಸಲು ದಾವೆ ಸಂಖ್ಯೆ - 303/2019
ಡಿಡಬ್ಲ್ಯು - 01
ದಿನಾಂಕಃ 19-07-2024
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ.ವಿ ಬಿ ಟಿ ವಕೀಲರಿಂದ**

ವಾದಿಯ ತಂದೆಯ ಹೆಸರು ನನಗೆ ಗೊತ್ತಿಲ್ಲ. ವಾದಿಯ ತಂದೆಯ ಹೆಸರು ಚಂದ್ರಗೌಡ ತಂದೆ ನರಸನಗೌಡ ಪಾಟೀಲ ಎಂದರೆ ನನಗೆ ಗೊತ್ತಿಲ್ಲ. ವಾದಿಯ ತಾಯಿಯ ಹೆಸರು ಕರಿಯವ್ವ ಇರುತ್ತದೆ. ವಾದಿಯ ತಾಯಿಯ ಗಂಡನ ಹೆಸರು ನನಗೆ ಗೊತ್ತಿಲ್ಲ. ವಾದಿಯ ತಾಯಿಯ ಗಂಡನ ಹೆಸರು ಚಂದ್ರಗೌಡ ಎಂದರೆ ನನಗೆ ಗೊತ್ತಿಲ್ಲ. ವಾದಿಯ ತಾಯಿಗೆ ಎಷ್ಟು ಜನ ಮಕ್ಕಳು ಇದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿಯ ತಾಯಿಗೆ ಇಬ್ಬರೂ ಮಕ್ಕಳು ಒಬ್ಬನೇ ಹೆಸರು ನರಸನಗೌಡ

(ವಾದಿ) ಇನ್ನೊಬ್ಬ ರುದ್ರಗೌಡ ಎಂದರೆ ಸರಿ. ರುದ್ರಗೌಡ ತೀರಿಕೊಂಡಿದ್ದಾನೆ ಎಂದರೆ ಸರಿ. ರುದ್ರಗೌಡ ಮತ್ತು ಆತನ ಹೆಂಡತಿ ನೀಲವ್ವ ಯಾವುದೇ ಮಕ್ಕಳು ಇಲ್ಲದೇ ತೀರಿಕೊಂಡಿರುತ್ತಾರೆ ಎಂದರೆ ಸರಿ.

ಈ ದಾವೆಯು ಯಾರು ಯಾರ ವಿರುದ್ಧ ಹೂಡಿದ್ದಾರೆ ಎಂಬುವುದರ ಬಗ್ಗೆ ನಿಮಗೆ ಮಾಹಿತಿ ಇದೆಯಾ ಎಂದರೆ ನನಗೆ ಮಾಹಿತಿ ಇರುವುದಿಲ್ಲ. ಈ ದಾವೆಯು ಯಾವ ಉದ್ದೇಶಕ್ಕಾಗಿ ಹೂಡಿದ್ದಾರೆ ಎಂದು ನಿಮ್ಮ ಸ್ವಂತಕ್ಕೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನೀವು ಹಾಕಿರುವ ತಕರಾರಿನ ಬಗ್ಗೆ ನಿಮಗೆ ಮಾಹಿತಿ ಇದೆಯಾ ಎಂದರೆ ಇದೆ ಆಸ್ತಿಯ ಬಗ್ಗೆ ತಕರಾರನ್ನು ಹಾಕಿರುತ್ತೇವೆ. ವಾದಿಯು ಈ ದಾವೆಯನ್ನು ಯಾವ ಸರ್ವೇ ನಂಬರನಲ್ಲಿ ಹೂಡಿದ್ದಾರೆ ಎಂದರೆ ಸಾಕ್ಷಿಯು ಸರ್ವೇ ನಂಬರ 79/1 ರಲ್ಲಿ ಹೂಡಿರುತ್ತಾರೆ. ವಾದಿಯು ಈ ದಾವೆಯನ್ನು ಎಷ್ಟು ವಿಸ್ತೀರ್ಣಕ್ಕೆ ಹೂಡಿದ್ದಾನೆ ಎಂದರೆ 14 ಎಕರೆ 14 ಗುಂಟೆಗೆ ಹೂಡಿರುತ್ತಾನೆ ಅದರಲ್ಲಿ ಸರ್ವೇ ನಂಬರ 79 ರಲ್ಲಿ 7 ಎಕರೆ 7 ಗುಂಟೆ ಇರುತ್ತದೆ ಮತ್ತು 79/1 ರಲ್ಲಿ 3 ಎಕರೆ 35 ಗುಂಟೆ ಇರುತ್ತದೆ.

ವಾದಿಯು ಕಲಿವಾಳ ಗ್ರಾಮದ ಸರ್ವೇ ನಂಬರ 79/2ಎ ರಲ್ಲಿರುವ ವಿಸ್ತೀರ್ಣ 3 ಎಕರೆ 35 ಗುಂಟೆ ಜಮೀನಿಗೆ ದಾವೆಯನ್ನು ಹೂಡಿದ್ದಾರೆ ಎಂದರೆ ಅದು ನನಗೆ ಗೊತ್ತಿಲ್ಲ. ಸದರಿ ದಾವಾ ಆಸ್ತಿಯು ಯಾರ ಹೆಸರಿನಲ್ಲಿದೆ ಎಂದರೆ ನನಗೆ ಹೇಳಲು ಆಗುವುದಿಲ್ಲ. ಸದರಿ ದಾವಾ ಆಸ್ತಿಯು ನಮ್ಮ ತಂದೆಯವರ ಹೆಸರಿನಲ್ಲಿದೆ. ಸದರಿ ದಾವಾ ಆಸ್ತಿಯು ವಾದಿಯ ಸಹೋದರನಾದ ಮೃತ ರುದ್ರಗೌಡನ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಯಾರ ಹೆಸರಿನಲ್ಲಿದೆ ಎಂದರೆ ನೀಲಾ ಉರ್ಫ ನೀಲವ್ವ ಗಿಡ್ಡವ್ವ ಮಾದರರವರ ಹೆಸರಿನಲ್ಲಿ ಇರುತ್ತದೆ. ಸದರಿ ದಾವಾ ಆಸ್ತಿಯು ನೀಲಾ ಉರ್ಫ ನೀಲವ್ವರವರ ಹೆಸರಿನಲ್ಲಿದೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದಾದರೂ ದಾಖಲಾತಿಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿರುತ್ತೇನೆ.

ದಾವಾ ಆಸ್ತಿಯ ಪೂರ್ವಕ್ಕೆ ಮುಳಗುಂದರವರ ಆಸ್ತಿ ಇದೆ ಎಂದರೆ ಸರಿ, ಪಶ್ಚಿಮಕ್ಕೆ ಸರ್ವೇ ನಂಬರ 79/1ಎ ಇದೆ ಎಂದರೆ ಸರಿ, ಉತ್ತರಕ್ಕೆ ರಸ್ತೆ ಇದೆ ಎಂದರೆ ಸರಿ, ದಕ್ಷಿಣಕ್ಕೆ ನಿಮ್ಮದೇ ಜಮೀನು ಇದೆ ಎಂದರೆ ಸರಿ. ಸದರಿ ದಾವಾ ಜಮೀನು ನಿಮಗೆ ಅಥವಾ ನಿಮ್ಮ ಹಿರಿಯರಿಗೆ ಹೇಗೆ ಬಂದಿತ್ತು ಎಂದು ಹೇಳಲು ಆಗುತ್ತದೆಯೇ ಎಂದರೆ ಸದರಿ ದಾವಾ ಜಮೀನು

ನಮಗೆ ಸರಕಾರದಿಂದ ಬಂದಿರುತ್ತದೆ. ಸರಕಾರವು ನಿಮಗೆ ದಾವಾ ಜಮೀನನ್ನು ಯಾವ ದಿನಾಂಕ, ತಿಂಗಳು, ವರ್ಷದಿಂದ ನಿಮಗೆ ನೀಡಿದರು ಎಂದರೆ ನನಗೆ ಮಾಹಿತಿ ಇಲ್ಲ. ಆದರೆ 1965 ರಿಂದ ನಾವು ಕಬ್ಜೆಯಲ್ಲಿ ಇರುತ್ತೇವೆ.

ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನು ಬರೆದಿದ್ದಾರೆ ಎಂದು ನಿಮಗೆ ಮಾಹಿತಿ ಇದೆಯಾ ಎಂದರೆ ಇರುವುದಿಲ್ಲ. ದಾವಾ ಆಸ್ತಿಯು ವಾದಿಯ ತಾಯಿಯಾದ ಗದಿಗೆವ್ವರವರ ಹೆಸರಿಗೆ ಮತ್ತು ರುದ್ರಗೌಡನ ಹೆಸರಿಗೆ ಯಾವಾಗ ಬದಲಾಯಿತು ಎಂದರೆ ರುದ್ರಗೌಡನ ಹೆಸರಿಗೆ 1981-82 ರಲ್ಲಿ ಬದಲಾಗಿರುತ್ತದೆ. ದಾವಾ ಆಸ್ತಿಯು ವಾದಿಯ ತಾಯಿಯಾದ ಗದಿಗೆವ್ವರವರ ಹೆಸರು ಯಾವಾಗ ತೆಗೆದು ಹಾಕಿ ರುದ್ರಗೌಡನ ಹೆಸರು ಯಾವಾಗ ನಮೂದು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಆದರೆ ನಮ್ಮ ಹೆಸರು ಉತಾರದಲ್ಲಿ ಇರುತ್ತದೆ. ನಿಮ್ಮ ಸಾಕ್ಷ್ಯ ಪ್ರಮಾಣ ಪತ್ರದ 5 ನೇ ಪ್ಯಾರಾದಲ್ಲಿ ಬರೆದಿರುವ ಹಾಗೆ " ದಾವೇದ ಆಸ್ತಿಯ ಪಹಣಿ ಪತ್ರಿಕೆಯಲ್ಲಿ ದಿಃ01-09-1957 ರಿಂದ 1970 ವರೆಗೆ ಪೋತಿ ರುದ್ರಗೌಡ ಸಿ ಪಾಟೀಲ ಈತನ ಮತ್ತು ವಾದಿಯ ತಾಯಿಯಾದ ಗದಿಗೆವ್ವ ಕೋಂ ಚಂದ್ರಗೌಡ ಪಾಟೀಲ ಈತಳ ಹೆಸರು ದಾಖಲ್ ಆಗಿದ್ದು, ಖಲಿ ಕಡಿಗೆ ಸನ್ 1971 ರಲ್ಲಿ ವಾದಿ ಮತ್ತು ವಾದಿಯ ಪೋತಿ ಸಹೋದರ ರುದ್ರಗೌಡ ಸಿ ಪಾಟೀಲ ಪಹಣಿಯಲ್ಲಿ ಹೆಸರುಗಳು ದಾಖಲ್ ಆಗಿದ್ದು ಇತ್ತು ಅನ್ನುವ ಮತ್ತು ವಾದಿ ಹಾಗೂ ಪೋತಿ ಸಹೋದರ ರುದ್ರಗೌಡ ಇವರು ಅಪಸಾತ್ ವಾಟ್ನಿ ಮಾಡಿಕೊಂಡ ಮೇರೆಗೆ ದಾವೇದ ಆಸ್ತಿಗೆ ಸಂಬಂಧಿಸಿ ಕಲಿವಾಳ ಗ್ರಾಮದ ಡ ನಂ.2022 ನೇದ್ದು ಸನ್ 1983 ರಲ್ಲಿ ಮಂಜೂರಾಗಿದ್ದು, ಸದರಿ ವಾಟ್ನಿ ಪ್ರಕಾರ ದಾವೇದ ಆಸ್ತಿಯು ವಾದಿಯ ಪೋತಿ ಸಹೋದರ ರುದ್ರಗೌಡ ಸಿ ಪಾಟೀಲ ಈತನ ಹಿಸ್ಸೆಗೆ ಬಂದಿದ್ದು, ಆ ಕಾರಣ ದಾವೇದ ಆಸ್ತಿಯ ದಾಖಲಾತಿಯಲ್ಲಿ ಇವತ್ತಿನವರೆಗೂ ಪೋತಿ ರುದ್ರಗೌಡನ ಹೆಸರು ಮುಂದುವರೆದುಕೊಂಡು ಬಂದಿರುತ್ತದೆ. " ಎಂದು ಬರೆಸಿರುತ್ತೀರಿ ಎಂದರೆ ಸುಳ್ಳು. ನಿಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ 1957 ರಿಂದ ವಾದಿಗಳು ಕಬ್ಜಾದಲ್ಲಿ ಇದ್ದಾರೆ ಎಂದು ನೀವು ಬರೆಸಿದ್ದೀರಾ ಎಂದರೆ ಸುಳ್ಳು. ಮುಂದುವರೆದು ನಾವುಗಳೆ ದಾವಾ ಆಸ್ತಿಯಲ್ಲಿ ಕಬ್ಜಾದಲ್ಲಿ ಇರುತ್ತೇವೆ. ದಾವಾ ಆಸ್ತಿಯ ಮಾಲೀಕರು, ಕಬ್ಜೆದಾರರು ಎಂದು ಮತ್ತು ಬೆಳೆ ಬೆಳೆದಿರುವ ಬಗ್ಗೆ ನೀವು ಯಾವುದಾದರೂ ಬ್ಯಾಂಕಿನಲ್ಲಿ ಸಾಲ ಪಡೆದಿದ್ದೀರಾ ಎಂದರೆ ಪಡೆದಿರುವುದಿಲ್ಲ.

ವಾದಿಯ ತಾಯಿ ಗದಿಗೆವ್ವ, ವಾದಿ ಮತ್ತು ಮೃತ ರುದ್ರಗೌಡರವರು ಯಾವಾಗ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡರು ಎಂದರೆ 1981-82 ರಲ್ಲಿ ಸೃಷ್ಟಿ ಮಾಡಿಕೊಂಡಿರುತ್ತಾರೆ. ನಿಮ್ಮ ಪ್ರಕಾರ ಸುಮಾರು 45 ವರ್ಷಗಳ ಹಿಂದೆ ಗದಿಗೆವ್ವ, ವಾದಿ ಮತ್ತು ಮೃತ ರುದ್ರಗೌಡರವರು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿದ್ದಾರೆ ಎಂದರೆ ಸರಿ. ವಾದಿಯ ತಾಯಿ ಗದಿಗೆವ್ವ, ವಾದಿ ಮತ್ತು ಮೃತ ರುದ್ರಗೌಡರವರು ಸೃಷ್ಟಿಸಿಕೊಂಡ ಸುಳ್ಳು ದಾಖಲೆಗಳನ್ನು ಯಾವುದೇ ನ್ಯಾಯಾಲಯದಲ್ಲಿ ನೀವು ಪ್ರಶ್ನಿಸಿರುವುದಿಲ್ಲ ಎಂದರೆ ನಾವು ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಶ್ನಿಸಿರುತ್ತೇವೆ. ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ನೀವು ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡ ವಿಷಯವಾಗಿ ವಾದಿಗಳು ನಿಮ್ಮ ವಿರುದ್ಧ ಪ್ರಕರಣವನ್ನು ದಾಖಲಿಸಿರುತ್ತಾರೆ ಅದು ನಿಮ್ಮ ವಿರುದ್ಧವಾಗಿ ಆದೇಶ ಆಗಿರುತ್ತದೆ ಎಂದರೆ ಸುಳ್ಳು. ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿಯೂ ಸಹ ನಿಮ್ಮ ವಿರುದ್ಧ ಆದೇಶ ಆಗಿರುತ್ತವೆ ಎಂದರೆ ಸುಳ್ಳು.

ವಾದಿಯ ತಾಯಿ ಗದಿಗೆವ್ವ, ವಾದಿ ಮತ್ತು ರುದ್ರಗೌಡರವರು ಸೃಷ್ಟಿಸಿಕೊಂಡು ದಾಖಲೆ ಮಾಡಿಕೊಂಡ ದಾವಾ ಆಸ್ತಿಯ ವಿರುದ್ಧ ನೀವು ಇಲ್ಲಿಯವರೆಗೂ ಯಾವುದೇ ನ್ಯಾಯಾಲಯದಲ್ಲಿ ಸದರಿ ದಾಖಲೆಗಳನ್ನು ಪ್ರಶ್ನಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಉತಾರದಲ್ಲಿ ಇಲ್ಲಿಯವರೆಗೂ ಸಹ ಮೃತ ರುದ್ರಗೌಡನ ಹೆಸರು ಚಾಲ್ತಿಯಲ್ಲಿ ಇದೆ ಎಂದರೆ ಸರಿಯಲ್ಲ. ಗಂಗವ್ವ ತಾಯಿ ಮರಿಯವ್ವ ಹರಿಜನರವರು ನಿಮಗೆ ಏನಾಗಬೇಕು ಎಂದರೆ ದೊಡ್ಡವ್ವ ಆಗಬೇಕು. ಸದರಿ ಗಂಗವ್ವರವರು ವಾದಿ ಮತ್ತು ವಾದಿಯ ಸಹೋದರನಾದ ರುದ್ರಗೌಡನ ವಿರುದ್ಧ ಇದೇ ನ್ಯಾಯಾಲಯದಲ್ಲಿ ಸರ್ವೆ ನಂಬರ 79/ಎ ಗೆ ಸಂಬಂಧಪಟ್ಟಂತೆ ದಾವೆಯನ್ನು ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಗಂಗವ್ವರವರು ಸರ್ವೆ ನಂಬರ 79/ಎ ಗೆ ಸಂಬಂದಪಟ್ಟಂತೆ ಖರೀದಿ ಪತ್ರವನ್ನು ರದ್ದು ಮಾಡಲು ದಾವೆಯನ್ನು ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ.

ವಾದಿಯ ತಾಯಿ, ವಾದಿ ಮತ್ತು ರುದ್ರಗೌಡರವರು ಸರ್ವೆ ನಂಬರ 79 ರಲ್ಲಿ ಎಷ್ಟು ಕ್ಷೇತ್ರವನ್ನು ಖರೀದಿಸಿದರು ಎಂದರೆ ಅವರು ಯಾವುದೇ ಆಸ್ತಿಯನ್ನು ಖರೀದಿ ಮಾಡಿರುವುದಿಲ್ಲ. 1983 ರಲ್ಲಿ ಮಂಜೂರಾದ ಡ ನಂಬರ 2022 ಅನ್ನು ರದ್ದುಪಡಿಸಲು ಕೋರಿ ನೀವು ಮೇಲ್ಮನವಿ ಏನಾದರೂ ಸಲ್ಲಿಸಿದ್ದೀರಾ ಎಂದರೆ ಸಲ್ಲಿಸಿರುತ್ತೇವೆ. ದಿಃ01-10-2019 ರಲ್ಲಿ ವಾದಿಯರ ಮತ್ತು ನಿಮ್ಮ ನಡುವೆ ಈ ದಾವೆಯನ್ನು ಹೂಡುವ ಸಲುವಾಗಿ ತಕರಾರು ಬಂದಿತ್ತು

ಎಂದರೆ ಸರಿ. ತಹಶೀಲ್ದಾರ ನ್ಯಾಯಾಲಯದಲ್ಲಿ ತಕರಾರು ಆದ ಕಾರಣ ವಾದಿಯರು ನಿಮ್ಮ ವಿರುದ್ಧ ಈ ದಾವೆಯನ್ನು ಹೂಡಿದ್ದಾರೆ ಎಂದರೆ ಸರಿ. 1 ರಿಂದ 3 ನೇ ಪ್ರತಿವಾದಿಗಳು ಈ ದಾವಾ ಆಸ್ತಿಗೆ ತಕರಾರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವಾ ಆಸ್ತಿಯು ಮೃತ ರುದ್ರಗೌಡನ ಹೆಸರಿನಲ್ಲಿ ಇಂದಿನವರೆಗೂ ಚಾಲ್ತಿಯಲ್ಲಿ ಇದೆ ಎಂದರೆ ಸರಿಯಲ್ಲ ನಾವು ಕಬ್ಜೆಯಲ್ಲಿ ಇದ್ದೇವೆ. ದಾವಾ ಆಸ್ತಿಯು ನಿಮಗಾಗಲೀ ಅಥವಾ ನಿಮ್ಮ ಹಿರಿಯರಿಗೆಯಾಗಲಿ ಸರಕಾರದಿಂದ ಮಂಜೂರು ಆಗಿರುವುದಿಲ್ಲ, ವಾದಿಯ ತಾಯಿಯಾದ ಗದಿಗೆವ್ವ ಅವರ ನಂತರ ಮೃತ ರುದ್ರಗೌಡನ ಹೆಸರು ನಂತರ ಈಗ ವಾದಿಯ ಕಬ್ಜಾ ಮತ್ತು ಮಾಲೀಕತ್ವದಲ್ಲಿ ಇರುತ್ತದೆ ಎಂದರೆ ಸರಿಯಲ್ಲ.

1957 ರಿಂದ 1970 ರ ತನಕ ವಾದಿಯ ತಾಯಿಯಾದ ಗದಿಗೆವ್ವರವರ ಹೆಸರು ದಾವಾ ಆಸ್ತಿಯ ಉತಾರದಲ್ಲಿ ಇತ್ತು ಎಂದರೆ ಸರಿಯಲ್ಲ. ಮುಂದುವರೆದು ನಮ್ಮ ತಂದೆಯವರ ಹೆಸರಿನಲ್ಲಿ ಇರುತ್ತದೆ. ಗದಿಗೆವ್ವ ಇದ್ದಾಗಲೇ ವಾದಿ ಮತ್ತು ರುದ್ರಗೌಡನ ಹೆಸರಿಗೆ ದಾವಾ ಆಸ್ತಿಯು ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ವಾದಿಯರ ಅಧಿಕೃತ ಆಸ್ತಿಯಾಗಿದ್ದು, ಅವರ ಮಾಲೀಕತ್ವದಲ್ಲಿ ಇರುತ್ತದೆ ನಿಮಗೆ ಸರಕಾರದಿಂದ ಮಂಜೂರು ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ನಿಮಗಾಗಲೀ ಅಥವಾ ನಿಮ್ಮ ಹಿರಿಯರಿಗೆಯಾಗಲಿ ಯಾವುದೇ ಹಕ್ಕು ಇಲ್ಲದಿದ್ದರೂ ವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ವಾದಿಯರೆ ಮಾಲೀಕರು ಕಬ್ಜಾದಾರರು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.